**ಪಾಠ–10** **ಜೂನ್ 9–16**

# ಆಮೇರಿಕ ಮತ್ತು ಬಾಬೇಲ್

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** ಪ್ರಕಟಣೆ 13:1–12, 14:9–11; 16:2; 19:20; 20:41; ಯೆರೆಮಿಯ 51:6, 7, 53, 57; ಪ್ರಕಟನೆ 18:1–4.

***ಸ್ಮರಣ ವಾಕ್ಯ :*** **"ನಿನ್ನ ಜನರ ಪಕ್ಷವನ್ನು ಹಿಡಿದಿರುವ ಮಹಾ ಪಾಲಕನಾದ ಮಿಕಾಯೇಲನು ಆ ಕಾಲದಲ್ಲಿ ಏಳುವನು; ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು. ಆಗ ನಿನ್ನ ಜನರೊಳಗೆ ಯಾರ ಹೆಸರುಗಳು {ಜೀವಭಾಧ್ಯರ} ಪಟ್ಟಿಯಲ್ಲಿ ಸಿಕ್ಕುವವೋ ಅವರೆಲ್ಲರೂ ರಕ್ಷಿಸಲ್ಪಡುವರು" (ದಾನಿಯೇಲನು 12:1)**

ಕಳೆದ ವಾರ ನಾವು ನಕಲಿ ತ್ರೈಯೇಕತ್ವದ ಕುರಿತಾಗಿ ನೋಡಿದೆವು, ಸೈತಾನನು (ಘಟಸರ್ಪನು) ಮತ್ತು ಲೋಕದ ಎರಡು ಶಕ್ತಿಗಳು ಸೇರಿಕೊಂಡು ದೇವ ಜನರ ವಿರುದ್ದವಾಗಿ ಹಿಂಸೆಯನ್ನು ತರುತ್ತವೆ.

ಇದರಲ್ಲಿ ಒಂದು ಶಕ್ತಿಯು, ಸಮುದ್ರದ ಮೃಗ (ಪ್ರಕಟಣೆ 13:1–10), ಇದನ್ನು ಚಿರತೆ, ಕರಡಿ, ಮತ್ತು ಸಿಂಹದ ಮಿಶ್ರಣವಾಗಿ ವಿವರಿಸಲಾಗಿದೆ.(ಪ್ರಕಟಣೆ 13:2) ಈ ಚಿತ್ರಣವನ್ನು ದಾನಿಯೇಲ 7:4–6 ರಿಂದ ನೇರವಾಗಿ ತೆಗೆದುಕೊಳ್ಳಲಾಗಿದೆ. ಆರನೆಯ ವಾರದ ಪಾಠದಲ್ಲಿ ನಾವು ನೋಡಿದ ಹಾಗೆ ದಾನಿಯೇಲ 7 ರಲ್ಲಿ ಬಾಬೇಲಿನ ಉದಯವಾದ ಮೇಲೆ (ಸಿಂಹ), ಮೆದ್ಯ–ಪಾರಸಿಯ (ಕರಡಿ), ಮತ್ತು ಗ್ರೀಕ್ (ಚಿರತೆ) ಅಧಿಕಾರಕ್ಕೆ ಬಂದವು ನಂತರ ಈ ಲೋಕದ ಶಕ್ತಿಯಾದ ರೋಮ್ ಉದಯಿಸಿತು. ಇದು ರಾಜಕೀಯ ರೋಮ್ ಆಗಿ ಉದಯಿಸಿ ನಂತರ ಧಾರ್ಮಿಕ ರೋಮ್ ಆಗಿ ಪರಿವರ್ತನೆ ಹೊಂದಿತು. ಇದುವೇ ದಾನಿಯೇಲ 7:7, 8; 19–21; 23–25; ರಲ್ಲಿ ನೋಡುವ ಹಾಗೆ ಇದು ನಾಲ್ಕನೇಯ ಮೃಗದಿಂದ ನೇರವಾಗಿ ಹೊರಗೆ ಬಂದಿತು. ದಾನಿಯೇಲ

7 ರಲ್ಲಿ ಹೇಳಲಾಗಿರುವ ಅನೇಕ ಲಕ್ಷಣಗಳು ಧಾರ್ಮಿಕ ರೋಮ್ ನಲ್ಲಿ ಕಾಣುತ್ತವೆ, ಮತ್ತು ಇವು ಪ್ರಕಟಣೆ 13:1–10 ರಲ್ಲಿ ಹೇಳಲಾಗಿರುವ ಮೃಗವನ್ನು ಹೋಲುತ್ತವೆ. ಆದ್ದರಿಂದ ಸತ್ಯವೇದ ಪಂಡಿತರು ಪ್ರಕಟಣೆ 13 ನೇಯ ಅಧ್ಯಾಯದ ಕೊನೆಯ ಕಾಲದ ಘಟನೆಗಳಲ್ಲಿ ರೋಮ್ ಒಂದು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂದು ನಂಬುತ್ತಾರೆ.

ಆದರೂ ಕೂಡ, ರೋಮ್ ಒಂಟಿಯಾಗಿಲ್ಲ. ಮತ್ತೊಂದು ಶಕ್ತಿಯು ಕಾಣುತ್ತದೆ. ಈ ವಾರದಲ್ಲಿ ನಾವು ಪ್ರಕಟಣೆ 13 ನೇಯ ಅಧ್ಯಾಯವನ್ನು ಅಧ್ಯಯನ ಮಾಡೋಣ ಮತ್ತು ಆ ಅಧ್ಯಾಯದಲ್ಲಿ ಹೇಳಲಾಗಿರುವ ಶಕ್ತಿಗಳ ಮತ್ತು ಘಟನೆಗಳ ಕುರಿತಾಗಿ ನೋಡೋಣ, ನಾವು ಯಾವಾಗಲೂ ಕೇಳುವ ಪ್ರಶ್ನೆಗಳ ಹಾಗೆ ಈ ಘಟನೆಗಳ ಅರ್ಥವೇನು, ಮತ್ತು ಇದಕ್ಕಾಗಿ ನಾವು ಹೇಗೆ ಸಿದ್ದರಾಗಬೇಕು?

**ಈ ವಾರದ ಪಾಠವನ್ನು ಜೂನ್ 9, ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಸಾಯುವಂತಹ ಗಾಯ ಗುಣವಾಯಿತು

**ಪ್ರಕಟನೆ 13:1–10 ನ್ನು ಓದಿರಿ ಮತ್ತು ಇದು ಯಾಕೆ ರೋಮ್ ಸಾಮ್ರಾಜ್ಯವನ್ನು ಸೂಚಿಸುತ್ತದೆ ಹಿಂದೆ ಮತ್ತು ಮುಂದೆ ಭವಿಷ್ಯದಲ್ಲಿ ಅದರ ಪಾತ್ರವನ್ನು ಕುರಿತಾಗಿ ಇದು ಏನು ಹೇಳುತ್ತದೆ. ಇದಕ್ಕೆ ನೀಡಲಾಗಿರುವ ಪ್ರಮುಖವಾದ ಪಾತ್ರವನ್ನು ಗಮನಿಸಿರಿ. ಇದು ಕೊನೆಯ ದಿನಗಳ ಹಿನ್ನಲೆಯಲ್ಲಿ ಯಾವ ಅರ್ಥವನ್ನು ನೀಡುತ್ತದೆ?**

ಎಲ್ಲಾ ಸಭೆಗಳಲ್ಲಿ ದೇವರ ಜನರು ಇರುವ ಹಾಗೆ,ಈ ಸಭೆಯು ಚರಿತ್ರೆಯಲ್ಲಿ ಮತ್ತು ಕೊನೆಯ ಕಾಲದಲ್ಲಿ ವಹಿಸುವ ಪಾತ್ರದ ಕುರಿತಾಗಿ ಸತ್ಯವೇದವು ಬಹಳ ಸ್ಪಷ್ಟವಾಗಿ ತಿಳಿಸುತ್ತದೆ.

**ಪ್ರಕಟನೆ 13:3 ನ್ನು ಓದಿರಿ. ಇಲ್ಲಿ ಏನು ನಡೆಯುತ್ತಿದೆ, ಇದು ರೋಮ್ ನ ಪ್ರಾಬಲ್ಯದ ಕುರಿತಾಗಿ ಏನು ಹೇಳುತ್ತದೆ?**

____________________________________________

____________________________________________

ಅನೇಕ ಶತಮಾನಗಳ ತನಕ ರೋಮ್ ಸಭೆಯು ಧಾರ್ಮಿಕ ಕೇಂದ್ರವಾಗಿ ಅನೇಕ ವಿಧದಲ್ಲಿ ಅಂದರೆ ಪಾಶ್ಚಿಮಾತ್ಯ ದೇಶಗಳಲ್ಲಿ ರಾಜಕೀಯ ಕೇಂದ್ರವಾಗಿ ಬೆಳೆಯುತ್ತಿದೆ. ಆಕೆಯ ಶಕ್ತಿಯ ಕುರಿತಾಗಿ ಹೇಳಬೇಕಾದರೆ ರೋಮ್ ಸಾಮ್ರಾಜ್ಯದ ಚಕ್ರವರ್ತಿ ಹೆನ್ರಿ ೪ಗಿ ಪೋಪ್ ಗ್ರೆಗರಿ VII ನ ವಿರುದ್ದ ಕೊಪಗೊಂಡಿದ್ದನು ಇದರಿಂದ ಪೋಪ್ ನ ಜೊತೆಯಲ್ಲಿ ಶಾಂತಿ ಒಪ್ಪಂದ ಮಾಡಲು ಪೋಪ್ ನ ಮನೆಗೆ ಬಂದನು. ಅಲ್ಲಿ, ಚಳಿಗಾಲದ ಚಳಿಯಲ್ಲಿ ಚಕ್ರವರ್ತಿಯು ಮೂರು ದಿನಗಳ ಕಾಲ ಮನೆಯ ಹೊರಗಡೆ ತೋಟದಲ್ಲಿ ಕಾಯಬೇಕಾಯಿತು. ನಂತರ ಚಕ್ರವರ್ತಿಗೆ ಪೋಪ್ ನನ್ನು ನೋಡುವ ಅವಕಾಶ ಕಲ್ಪಿಸಲಾಯಿತು. ನಂತರ ಬಂದ ಗ್ರೆಗರಿ VII ತನ್ನ ದರ್ಪದಲ್ಲಿ ಬಂದು ನನಗೆ ಎಲ್ಲಾ ಆರಸರನ್ನು ಮತ್ತು ಚಕ್ರವರ್ತಿಗಳನ್ನು ಬದಲಿಸುವ ಅಧಿಕಾರವಿದೆ ಎಂದು ಹೇಳಿದನು.

ಆದರೂ ಕೂಡ, ಧಾರ್ಮಿಕ ಸುಧಾರಣೆಯು ಪ್ರಭಾವದಿಂದ ಜ್ಞಾನೋದಯವಾಗಿ ಮತ್ತು ಫ್ರೆಂಚ್ ಕ್ರಾಂತಿಯ ಪರಿಣಾಮವಾಗಿ ರೋಮ್ ನ ರಾಜಕೀಯ ಮತ್ತು ಧಾರ್ಮಿಕ ಶಕ್ತಿಯು ಹದಿನೆಂಟನೇಯ ಶತಮಾನದ ಕೊನೆಗೆ ಕ್ಷಿಣಿಸುತ್ತಾ ಹೋಯಿತು. ಪೋಪ್ ಪಯಸ್ VI, ನನ್ನು 1798 ರಲ್ಲಿ ಫ್ರೆಂಚ್ ಸೈನ್ಯವು ಜನರಲ್ ಬಾರ್ತಿಯರ್ ಸೆರೆ ಹಿಡಿಯಿತು ಅವನು 1799 ರಲ್ಲಿ ಸೆರೆಯಲ್ಲೆ ಮರಣ ಹೊಂದಿದನು.

ಪ್ರಕಟಣೆ 13, ಮರಣಕರವಾದ ಗಾಯವು ಗುಣವಾಗುವ ಕುರಿತಾಗಿ ಹೇಳುತ್ತದೆ ಮತ್ತು ಆ ಮೃಗವು ಮತ್ತೆ ಅಧಿಕಾರಕ್ಕೆ ಬರುವುದರ ಕುರಿತಾಗಿ ಹೇಳುತ್ತದೆ.

ಮತ್ತು ಪೋಪ್ ಗ್ರೆಗರಿ VII ಯ ಕಾಲದಲ್ಲಿ ಇದ್ದ ಅಧಿಕಾರಾವನ್ನು ರೋಮ್ ಸಭೆ ಕಳೆದುಕೊಂಡಿದೆ, ಅದರೂ ಕೂಡ ಈಗಿನ ಕಾಲದ ಪೋಪ್ಗಳ ಪ್ರಖ್ಯಾತಿಯನ್ನು ನಾವು ಅಭಿನಂದಿಸಲೇ ಬೇಕು. ಅವರ ಪ್ರಭಾವ ಬೀರುವ ಶಕ್ತಿ ಅವರು ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ (ಉದಾಹರಣೆಗೆ 2015 ರಲ್ಲಿ ಅಮೇರಿಕದ ಎರಡೂ ಸದನಗಳನ್ನು ಉದ್ದೇಶಿಸಿ ಪೋಪ್ ಫ್ರಾನ್ಸಿಸ್ ಮಾಡಿದ ಭಾಷಣ ಐತಿಹಾಸಿಕವಾದದ್ದು). ಪ್ರವಾದನೆಯ ಪ್ರಕಾರ ಈ ಪ್ರಭಾವವು ಇನ್ನೂ ಬೆಳೆಯುತ್ತಾ ಹೋಗುತ್ತದೆ.

**ನಮಗೆ ನೀಡಲಾಗಿರುವ ಸಂದೇಶವನ್ನು ನಾವು ಬೋಧಿಸುವಾಗ ನಮಗೆ ಸ್ವಲ್ಪ ನೋವು ಉಂಟಾದರೂ ಕೂಡ ಅದನ್ನು ಸಾರುವುದರಲ್ಲಿ ಯಾವ ರೀತಿಯ ನಂಬಿಕೆಯನ್ನು ತೋರಿಸಬೇಕು? ಪ್ರಸ್ತುತ ಸತ್ಯವನ್ನು ನಾವು ಹೇಳುವಾಗ ರಾಜಕೀಯ ಒತ್ತಡಗಳಿಗೆ ನಾವು ಯಾಕೆ ಮಣಿಯಬಾರದು?**

**ಸೋಮವಾರ**

## ಪ್ರವಾದನೆಯಲ್ಲಿ ಅಮೇರಿಕ ದೇಶ

ಪ್ರಕಟಣೆ 13 ರಲ್ಲಿ ಹೇಳಿರುವ ಹಾಗೆ ರೋಮ್ ಈಗ ಮತ್ತು ಮುಂದೆ ಭವಿಷ್ಯದಲ್ಲಿ ಯಾವ ರೀತಿಯ ಪ್ರಭಾವವನ್ನು ಬೀರಬಹುದು? ಎಂದು ಜನರು ಸರಿಯಾದ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ. ತಮ್ಮ ಸೈನ್ಯಗಳನ್ನು ಮುಂದೆ ತಂದು ಯುದ್ಧಗಳನ್ನು ಮಾಡುವ ಕಾಲ ಹೋಯಿತು. ಇದಕ್ಕೆ ಸರಿಯಾದ ಉತ್ತರವನ್ನು ಪ್ರಕಟನೆ 13 ರಲ್ಲಿ ನಾವು ಕಾಣಬಹುದು.

ಪ್ರಕಟಣೆ 13:11,12 ನ್ನು ಓದಿರಿ. ಈ ಅಧಿಕಾರವನ್ನು ಗುರುತು ಹಿಡಿಯಲು ಈ ವಚನವು ನಮಗೆ ಹೇಗೆ ಸಹಾಯ ಮಾಡುತ್ತದೆ?

ಈ ಮೃಗಕ್ಕೆ ಮುಂಚಿತವಾಗಿ ಬಂದಿರುವ ಮೃಗವನ್ನು ಪ್ರೊಟೆಸ್ಟೆಂಟ್ ರು ರೋಮ್ ಸಾಮ್ರಾಜ್ಯಕ್ಕೆ ಹೋಲಿಸಿದ್ದಾರೆ ಯಾಕೆಂದರೆ ಇದಕ್ಕೆ 42 ತಿಂಗಳುಗಳ ಅಧಿಕಾರವನ್ನು ನೀಡಲಾಗಿದೆ (ಪ್ರಕಟಣೆ 13:5). 42 ತಿಂಗಳುಗಳು ಒಂದು ಕಾಲ, ಕಾಲಗಳು, ಮತ್ತು ಅರ್ಧ ಕಾಲಗಳಿಗೆ (ಪ್ರಕಟಣೆ 12:14) ಸರಿಯಾಗಿ ಹೊಂದಿಕೆ ಆಗುತ್ತದೆ. ಅಥವಾ 1260 ಪ್ರವಾದನೆಯ ದಿನಗಳಿಗೆ (ಪ್ರಕಟಣೆ 12:6) ಸರಿಹೊಂದುತ್ತದೆ. ಈ ಸಮಯದಲ್ಲಿ ಧಾರ್ಮಿಕ ರೋಮ್ ತನ್ನ ಶತ್ರುಗಳನ್ನು ಸಂಪೂರ್ಣವಾಗಿ ನಾಶ ಮಾಡಿತು. ಈ ಪ್ರವಾದನೆಯ ಸಮಯವನ್ನು (ಒಂದು ದಿನಕ್ಕೆ ಒಂದು ವರ್ಷದ ಆಧಾರದ ಮೇಲೆ) ಲೆಕ್ಕ ಹಾಕಿದರೆ ಇದರ ಅಧಿಕಾರವು ಕ್ರಿ ಶ. 538 ರಲ್ಲಿ ಪ್ರಾರಂಭವಾಗಿ ಕ್ರಿ. ಶ. 1798 ರಲ್ಲಿ ಅಂತ್ಯವಾಯಿತು. ಈ ವರ್ಷದಲ್ಲಿ ಪೋಪ್ ನನ್ನು ಬಂಧಿಸಲಾಯಿತು. ಈ ಸಮಯದಲ್ಲಿ ಧಾರ್ಮಿಕ ರೋಮ್ ಮರಣಕರವಾದ ಗಾಯವನ್ನು ಹೊಂದಿತು, ಮತ್ತು ಅದರ ಭವಿಷ್ಯವಾಣಿಯು ನಿಜವಾಯಿತು.

ಚರಿತ್ರೆಯ ಈ ಸಮಯದಲ್ಲಿ 42 ತಿಂಗಳುಗಳು ಮುಗಿಯುವ ಸಮಯದಲ್ಲಿ (1798) ಮತ್ತೊಂದು ಅಧಿಕಾರವು ಕಾಣಿಸಿತು. (ಪ್ರಕಟಣೆ 13:11, ಪ್ರಕಟಣೆ 13:1), ಈಗ ಅದು ಭೂಮಿಯ ಮೇಲಿಂದ ಬಂದಿತು. ಇದರ ಹಿಂದಿನ ಮೃಗಗಳು ನೀರಿನಿಂದ ಬಂದಿದ್ದವು. (ದಾನಿಯೇಲ 7:2,3), ಇದು ಸಾವಿರಾರು ಜನರನ್ನು ತೋರಿಸುತ್ತದೆ. ಆ ಜಾರಸ್ತ್ರಿಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ? ಅವು ಪ್ರಜೆ ಸಮೂಹ ಜನ ಭಾಷೆಗಳನ್ನು ಸೂಚಿಸುತ್ತವೆ. (ಪ್ರಕಟನೆ 17:15).

ಈ ಮತ್ತು ಇತರೆ ಕಾರಣಗಳಿಗಾಗಿ ಈ ಅಧಿಕಾರವನ್ನು ಅಮೇರಿಕ ದೇಶ ಎಂದು ಭಾವಿಸುತ್ತಾರೆ ಯಾಕೆಂದರೆ ಈ ದೇಶವು ಅನೇಕ ಜನರಿಂದ ತುಂಬಿದ ದೇಶವಾಗಿದೆ. ಇತರೆ ಯಾವ ದೇಶಗಳನ್ನೂ ಸಹ ತುಳಿಯುವ ಶಕ್ತಿಯನ್ನು ಹೊಂದಿದೆ ಎಂದು ಹೇಳಲು ಯಾವುದೇ ರೀತಿಯ ಸಂಶಯವಿಲ್ಲ.

1798 ರಲ್ಲಿ ಹೊಸ ಯುಗದ ದೇಶಗಳ ನಡುವೆ ಉದಯಿಸಿದ ದೇಶಗಳ ಪೈಕಿ ಈ ದೇಶವು ಶಕ್ತಿಶಾಲಿ ಮತ್ತು ಪ್ರಸಿದ್ದ ಮತ್ತು ಈ ಲೋಕದ ದೃಷ್ಟಿಯನ್ನು

ಅದು ಆಕರ್ಷಿಸಲಿಲ್ಲವೇ? ಇದಕ್ಕೆ ಕೊಡಲಾಗಿರುವ ಚಿನ್ಹೆಗಳು ಇದನ್ನು ಅಂಗೀಕರಿಸಲು ಯಾವುದೇ ಸಂದೇಹವನ್ನು ಕೊಡುವುದಿಲ್ಲ. ಒಂದು ದೇಶ ಒಂದೇ ಒಂದು ದೇಶ ಈ ಪ್ರವಾದನೆಯನ್ನು ನೆರವೇರುವಂತೆ ಮಾಡುತ್ತದೆ; ಇದು ಯಾವುದೇ ಸಂಶಯವಿಲ್ಲದೆ ಅಮೇರಿಕ ದೇಶವನ್ನು ಸೂಚಿಸುತ್ತದೆ. **ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 440**.

ಈ ಅಧಿಕಾರವು ಮೊದಲು ಕುರಿಯ ಹಾಗೆ ಮೃದುತ್ವವನ್ನು ತೋರಿಸಿದರೂ ಕೂಡ ಅದು ಮೃಗದ ಹಾಗೆ ಮಾತನಾಡುತ್ತದೆ (ಪ್ರಕಟಣೆ 13:11), ಹಿಂದಿನ ಮೃಗದ ಸಮಯದಲ್ಲಿ ನಡೆದ ಹಿಂಸೆಯನ್ನು ಜ್ಞಾಪಕಪಡಿಸುತ್ತದೆ. ಪ್ರಕಟಣೆ 13:11–17, ಹಾಗಾದರೆ ಪ್ರವಾದನೆಯು ಹೇಳುವ ಪ್ರಕಾರ ರೋಮ್ ಹೇಗೆ ತನ್ನ ಪ್ರಭಾವವನ್ನು ತೋರಿಸುತ್ತದೆ. ಅದು ಅಮೇರಿಕ ದೇಶದ ಶಕ್ತಿಯನ್ನು ತನ್ನ ಹಿಂದೆ ಇಟ್ಟುಕೊಂಡಿರುತ್ತದೆ.

**ಮಂಗಳವಾರ**

## ಆರಾಧನೆಯ ಸಮಸ್ಯೆ

ಚರಿತ್ರೆಯೂದ್ದಕ್ಕೂ ಕೂಡ ದೇವರು ವಿಗ್ರಹರಾಧನೆ ಮತ್ತು ತಪ್ಪಾದ ಆರಾಧನೆಗೆ ಒಳಗಾದವರನ್ನು ಸರಿಯಾದ ದಾರಿ ತರಲು ಪ್ರಯತ್ನಿಸುತ್ತಾನೆ. (ಮತ್ತಾಯ 4:8–10). ಕೊನೆಯ ಘಟನೆಗಳು ಪ್ರಕಟಣೆ 13 ರಲ್ಲಿ ತಿಳಿಸಲಾಗಿದೆ. ಆರಾಧನೆಯ ಸಮಸ್ಯೆ ಮತ್ತೆ ಹುಟ್ಟಿ ಬರುತ್ತದೆ. ಇಲ್ಲಿಯೂ ಕೂಡ , ದೇವರ ಮಕ್ಕಳು ಅವರು ಯಾರನ್ನು ಆರಾಧಿಸುತ್ತಾರೋ ಅವರೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. (ಯೆಹೋಶುವ 24:15).

ಎರಡನೇಯ ವಾರದ ಪಾಠದ ಶೀರ್ಷಿಕೆ ದಾನಿಯೇಲನು ಮತ್ತು ಕೊನೆಯ ಕಾಲ ನಾವು ಮೂವರು ಇಬ್ರಿಯ ಯುವಕರು ಬಂಗಾರದ ಪ್ರತಿಮೆಯನ್ನು ಆರಾಧಿಸುವಂತೆ ಆಜ್ಞೆಯನ್ನು ಪಡೆಯುವುದನ್ನು ನೋಡಿದೇವು (ದಾನಿಯೇಲ 3:5)ಪ್ರಕಟನೆ 13 ನೇಯ ಅಧ್ಯಾಯದಲ್ಲಿ ಅದೇ ರೀತಿಯ ಭಾಷೆಯನ್ನು

ಉಪಯೋಗಿಸಿ ದೇವರ ಜನರು ಕೊನೆಯ ಕಾಲದಲ್ಲಿ ಎದುರಿಸುವ ಕಷ್ಟಗಳ ಕುರಿತಾಗಿ ಹೇಳುತ್ತದೆ. ದಾನಿಯೇಲನ 3 ನೇಯ ಅಧ್ಯಾಯದಲ್ಲಿ ನಡೆದ ಘಟನೆಗಳು ಕೊನೆಯ ಕಾಲದಲ್ಲಿ ಮತ್ತೆ ಮರುಕಳಿಸುತ್ತ ಪ್ರಕಟನೆ 13 ರಲ್ಲಿ ತಿಳಿಸಲಾಗಿರುವ ಅಧಿಕಾರದ ಕುರಿತಾಗಿ ನಮ್ಮನ್ನು ಎಚ್ಚರಿಸುತ್ತದೆ. ಎಲ್ಲರೂ ಕೂಡ ಬಂಗಾರ ಪ್ರತಿಮೆಯನ್ನು ಆರಾಧಿಸುವಂತೆ ಆಜ್ಞೆಯನ್ನು ಹೋರಾಡಿಸಲಾಯಿತು ಇಲ್ಲದೆ ಹೋದರೆ ಅವರು ಉರಿಯುವ ಬೆಂಕಿಗೆ ತಳ್ಳಲ್ಪಡುತ್ತಿದ್ದರು, ಅದೇ, ರೀತಿಯಲ್ಲಿ ಪ್ರಕಟಣೆ 13 ರಲ್ಲಿ ಮೃಗದ ವಿಗ್ರಹವನ್ನು ಯಾರು ಪೂಜಿಸುವುದಿಲ್ಲವೋ ಅವರನ್ನು ಕೊಲ್ಲಲಾಗುವುದು ಎಂದು ತಿಳಿಸಲಾಗಿದೆ (ಪ್ರಕಟಣೆ 13:15).

**ಪ್ರಕಟಣೆ 14:9–11; 16:2; 19:20; 20:4. ಆರಾಧನೆಯು ಒಂದು ಪ್ರಮುಖವಾದ ವಿಷಯವಾಗುವ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?**

________________________________________

________________________________________

ಬಾಬೇಲ್ ಯಾವಾಗಲೂ ಕೂಡ ತಪ್ಪಾದ ಆರಾಧನೆಯ ಕೇಂದ್ರವಾಗಿತ್ತು. ಬಾಬೆಲ್ ಗೋಪುರವು ಅದನ್ನು ಕಟ್ಟುವವರ ಉದ್ದೇಶವನ್ನು ತೋರಿಸಿತು, ಲೂಸಿಫರನ ಹಾಗೆ ಆಕಾಶದ ಮೇಘಗಳ ಮೇಲಕ್ಕೆ ಏರಿಹೊಗುವೆ (ಯೆಶಾಯ 14:14) ಅದೇ ರೀತಿಯಲ್ಲಿ ಮತ್ತೊಂದು ಜಾಗತಿಕ ಅನಾಹುತದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪ್ರಯತ್ನವನ್ನು ಮಾಡಿದರು. ಭೂಮಿಯ ಮೇಲೆ ದೇವರು ಮತ್ತೆ ಎಂದಿಗೂ ಕೂಡ ಜಲಪ್ರಳಯವನ್ನು ತರುವುದಿಲ್ಲ ಎಂದು ಮಾಡಿದ ವಾಗ್ದಾನವನ್ನು ಅವರು ಮರೆತರು ( ಆದಿಕಾಂಡ 9:8–11).

ಅದೇ ರೀತಿಯಲ್ಲಿ ಅಂದಿನ ಬಾಬೇಲ್ ರಾಜ್ಯವು ಕೂಡ ಮಾನವ ಆಧಾರಿತವಾದ ಕೆಲಸಗಳ ಮೇಲೆ ತನ್ನ ನಂಬಿಕೆಯನ್ನು ಇಟ್ಟುಕೊಂಡಿತ್ತು. ಈ ಮಹಾ ಬಾಬೇಲ್ ನಾನು ಕಟ್ಟಿದ ಬಾಬೇಲ್ (ದಾನಿಯೇಲ 4:30). ನಂತರ

ಅರಸನಾದ ಬೆಲ್ಶಜ್ಜರ್ ಸೋಲೋಮನನ ದೇವಾಲಯದ ಬಂಗಾರದ ಪಾತ್ರೆಗಳನ್ನು ತೆಗೆದುಕೊಂಡು ಔತಣದಲ್ಲಿ ಅವುಗಳನ್ನು ಉಪಯೋಗಿಸಿ ಅದರಲ್ಲಿ ಅವರು ಮದ್ಯವನ್ನು ಕುಡಿದರು, ಮತ್ತು ಅವರ ಬಂಗಾರ ಮತ್ತು ಬೆಳ್ಳಿ ತಾಮ್ರ ಮತ್ತು ಕಬ್ಬಿಣದ ಮರದ ಮತ್ತು ಕಲ್ಲಿನ ದೇವರುಗಳನ್ನು ಮಹಿಮೆ ಪಡಿಸಿದರು (ದಾನಿಯೇಲ 5:3,4)ದೇವಾಲಯದ ಪವಿತ್ರವಾದ ಪಾತ್ರೆಗಳನ್ನು ನಶೆ ಬರಿಸುವ ಪಾನಿಯಗಳಿಂದ ತುಂಬಿ ಅದನ್ನು ನಶೆ ಏರುವ ಮಟ್ಟಿಗೆ ಕುಡಿದರು. ಇದರ ಪ್ರತಿಫಲವಾಗಿ, ಬಾಬೇಲ್ ಬಿದ್ದಾಗ ಅನೇಕರು ಕೊಲ್ಲಲ್ಪಟ್ಟರು. ಹೊರಗೆ ಸತ್ಯದ ಹಾಗೆ ಕಂಡರೂ ಕೊಡ ಮದ್ಯದ ರೀತಿಯಲ್ಲಿ ಬಾಬೇಲಿನ ಮದ್ಯದ ಹಾಗೆ ಸುಳ್ಳಿನ ಆರಾಧನೆಯು ಮತ್ತು ಸುಳ್ಳು ಆಲೋಚನೆಗಳು ಸೈತಾನನ ರಾಜ್ಯದ ನಾಣ್ಯಗಳಾಗಿವೆ.

**ನಾವು ಈಗ ಯಾವುದೇ ವಿಧವಾದ ಸುಳ್ಳು ಆರಾಧನೆಯಲ್ಲಿ ಭಾಗಿಯಾಗಿಲ್ಲ ಎಂದು ಹೇಗೆ ಖಚಿತ ಪಡಿಸಿಕೊಳ್ಳಬಹುದು?**

**ಬುಧವಾರ**

## ಬಾಬೇಲ್ ಎಂಬ ಮಹಾ ನಗರಿ

ಈ ಮುಂದಿನ ವಚನಗಳನ್ನು ಓದಿರಿ. ಬಾಬೇಲಿನ ಕುರಿತಾಗಿ ಅವು ಏನು ಹೇಳುತ್ತವೆ? ಯೆರೆಮಿಯ 516,7, 53, 57; ಜೆಕರ್ಯ 2:7; ಪ್ರಕಟಣೆ 17:5,6; 18:2,3.

ನಾವು ನಿನ್ನೆಯ ದಿನ ನೋಡಿದ ಹಾಗೆ, ಬಾಬೇಲ್ ಸುಳ್ಳು ಆರಾಧನೆಯ ರಾಜಧಾನಿ ಬಹಳ ದೊಡ್ಡದಾದ ಚರಿತ್ರೆಯನ್ನು ಹೊಂದಿದೆ; ಆದ್ದರಿಂದ ದೇಶಗಳನ್ನು ಮೋಸಗೊಳಿಸಲು ಅಂತ್ಯಕಾಲದಲ್ಲಿ ಇದು ಸರಿಯಾದ ಗುರುತಾಗಿದೆ.

**ಘಟಸರ್ಪವನ್ನು, ಸಮುದ್ರದ ಮೃಗವನ್ನು, ಮತ್ತು ಕೆಂಪಾದ ಘಟಸರ್ಪವನ್ನು ಹೋಲಿಕೆ ಮಾಡಿರಿ (ಪ್ರಕಟಣೆ 12:3, 13:1–3, 17:3). ಇವುಗಳಲ್ಲಿ ಯಾವ ಸಾಮ್ಯತೆ ಮತ್ತು ಯಾವ ವ್ಯತ್ಯಾಸವನ್ನು ನೋಡುವಿರಿ?**

________________________________________

________________________________________

ಎಲ್ಲಾ ಮೂರು ಮೃಗಗಳು,ಏಳು ತಲೆಗಳನ್ನು ಮತ್ತು ಹತ್ತು ಕೊಂಬುಗಳನ್ನು ಹೊಂದಿವೆ, ಇದು ದಾನಿಯೇಲನ 7 ರಲ್ಲಿ ಕಾಣುವ ಮೃಗದ ಒಟ್ಟು ತಲೆಗಳು ಮತ್ತು ಕೊಂಬುಗಳ ಸಂಖ್ಯೆಗೆ ಸರಿಯಾಗಿದೆ. ಪ್ರತಿಯೊಂದು ರಾಜ್ಯವು ಕೂಡ ತಮ್ಮ ಹಿಂದಿನ ರಾಜ್ಯದ ಮೇಲೆ ತನ್ನ ಸಾಮ್ರಾಜ್ಯವನ್ನು ಕಟ್ಟುತ್ತದೆ. ಅದೇ ರೀತಿಯಾಗಿ, ಕೆಂಪಾದ ಮೃಗವು ಘಟಸರ್ಪನ ಮತ್ತು ಸಮುದ್ರ ಮೃಗದ(ಇದು ರಾಜಕೀಯ ಮತ್ತು ಧಾರ್ಮಿಕ ರೋಮ್ ನ್ನು ಸೂಚಿಸುತ್ತದೆ). ಮತ್ತು ಭೂಮಿಯ ಮೇಲಿನ ಮೃಗದ ಮಿಶ್ರಣವಾಗಿದೆ (ಪ್ರಕಟನೆ 13:11–14), ದೇವರ ವಿರುದ್ದವಾಗಿರುವ ಎಲ್ಲಾ ಶಕ್ತಿಗಳು ಒಟ್ಟಾಗಿ ಸೇರಿಕೊಳ್ಳುತ್ತವೆ. **ಜಾಕೆಸ್ ಬಿ ದೌಕನ್, ಸೀಕ್ರೆಟ್ಸ್ ಆಫ್ ರೆವಲೆಶನ್, ಪುಟ 162**. ಇದಕ್ಕೆ ಜೊತೆಯಾಗಿ ಪ್ರಕಟನೆ 17 ರಲ್ಲಿ ಕಾಣುವ ಕೆಂಪಾದ ಮೃಗದ ಮೇಲೆ ಸವಾರಿ ಮಾಡುವ ಸ್ತ್ರಿಯು ರಾಜಕೀಯ ಮತ್ತು ಧಾರ್ಮಿಕ ಶಕ್ತಿಗಳ ಅಪವಿತ್ರವಾದ ಐಕ್ಯತೆಯಾಗಿದೆ. ಈ ಸ್ತ್ರಿಯು ಪ್ರಕಟನೆ 12 ರಲ್ಲಿ ಕಾಣುವ ಸ್ತ್ರೀಗೆ ವಿರುದ್ದವಾಗಿ ಕಾಣುತ್ತಾಳೆ.

| **ಪರಿಶುದ್ದವಾದ ಸ್ತ್ರೀ (ಪ್ರಕಟಣೆ 12)** | **ಜಾರತ್ವದ ಸ್ತ್ರೀ (ಪ್ರಕಟಣೆ 17)** |
|---|---|
| ಪರಲೋಕದಲ್ಲಿ | ನೀರಿನ ಮೇಲೆ |
| ಸೂರ್ಯನನ್ನು ಧರಿಸಿದ್ದಾಳೆ | ಧೂಮ್ರ ಮತ್ತು ಕೆಂಪು ಬಟ್ಟೆ ಧರಿಸಿದ್ದಾಳೆ |
| ಹತ್ತು ನಕ್ಷತ್ರಗಳು ತಲೆಯ ಮೇಲಿವೆ | ಚಿನ್ನ , ವಜ್ರ ಮತ್ತು ಮುತ್ತುಗಳನ್ನು ಧರಿಸಿದ್ದಾಳೆ |
| ಘಟಸರ್ಪನಿಂದ ಯುದ್ದ ಎದುರಿಸುತ್ತಾಳೆ | ಘಟಸರ್ಪನಿಂದ ಸಹಾಯ ಹೊಂದುತ್ತಾಳೆ |
| ಉಳಿದಿರುವ ಸಭೆಯ ತಾಯಿ | ಜಾರತ್ವ ಸ್ತ್ರೀಯರ ತಾಯಿ |

"ಜಾರತ್ವ ಸ್ತ್ರೀಯರ ತಾಯಿಯಾಗಿ" ಬಾಬೇಲ್ ತನ್ನ ಸಂತಾನವನ್ನು ಹಡೆಯುತ್ತಿದೆ. ವಿರೋಧತೆಯ ಸಭೆಯು ಅನೇಕ ವಿರೋಧತೆಯ ಸಭೆಗಳನ್ನು ಹೊಂದಿದೆ. ಆದರೆ ದೇವರು ವಿರೋಧ ಸಭೆಯು ನಡೆಸುವ ಯಾವುದೆ ಕಾರ್ಯಗಳನ್ನು ಎಂದಿಗೂ ತನ್ನ ಸ್ವಂತವಾದ ಸಭೆಯಾಗಿ ಪರಿಗಣಿಸುವುದಿಲ್ಲ. ಆತನ ಸ್ವಂತ ಜನರು ಸೈತಾನನಿಂದ ಅನೇಕ ಬಾರಿ ದಾಳಿಯನ್ನು ಎದುರಿಸಿದರೂ ಕೂಡ ಶತಮಾನಗಳ ತನಕ ಉಳಿಯುವರು.

ಪ್ರಕಟನೆ 14:6 ರಲ್ಲಿ ಬಾಬೇಲ್ ಬೀಳುವುದರ ಕುರಿತಾಗಿ ಎಚ್ಚರಿಕೆ ನೀಡಲಾಗಿದೆ. ಇದು ಕೊನೆಯ ಕಾಲದಲ್ಲಿ ಮೃಗದ ಮುದ್ರೆಯನ್ನು ಹೊಂದುವ ಮೋಸದ ತನಕ ನಡೆಸುತ್ತದೆ. (ಪ್ರಕಟನೆ 14:9–11). ಈ ಎಚ್ಚರಿಕೆಯನ್ನು ಕೊನೆಯ ಬಾರಿ ಇನ್ನೂ ಹೆಚ್ಚಿನ ಮಹತ್ವದಿಂದ ತಿಳಿಸಲಾಗುವುದು. ಬಾಬೇಲಿನಲ್ಲಿರುವ ದೇವರ ಮಕ್ಕಳು ಹೊರಗೆ ಬರುವಂತೆ ಮತ್ತು ದೇವರ ಉಳಿದಿರುವ ಸಭೆಗೆ ಸೇರುವಂತೆ ಮತ್ತೆ ಇದನ್ನು ಪ್ರಕಟಿಸಲಾಗುವುದು. (ಪ್ರಕಟನೆ 18:1–4).

**ಗುರುವಾರ**

## ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ

ವರ್ಷಗಳ ಹಿಂದ ಸತ್ಯವೇದ ಪ್ರವಾದನೆಯ ವಿದ್ಯಾರ್ಥಿಗಳು ಲೋಕದ ಘಟನೆಗಳನ್ನು ಬಹಳ ಆಸಕ್ತಿಯಿಂದ ಹಿಂಬಾಲಿಸುತ್ತಿದ್ದಾರೆ. ಅದರಲ್ಲೂ ಅವುಗಳನ್ನು ಕೊನೆಯ ಕಾಲಕ್ಕೆ ಹೋಲಿಸಿಕೊಂಡು ನೋಡುತ್ತಾರೆ. ಉದಾಹರಣೆಗೆ, ಅಮೇರಿಕ ದೇಶದ ಪಾತ್ರದ ಕುರಿತಾಗಿ ಆಲೋಚಿಸಿರಿ. 1851 ರ ಹಿಂದೆ ಕೆಲವು ಅಡ್ವೆಂಟಿಸ್ಟ್ ರು ಎರಡನೇಯ ಮೃಗವನ್ನು ಅಮೇರಿಕ ಎಂದು ಗುರುತಿಸಿದರು ((ಪ್ರಕಟನೆ 13:11–15), ಅಮೇರಿಕ ದೇಶಕ್ಕೆ ನೀಡಿದ ದೊಡ್ಡ ಸ್ಥಾನಮಾನವಾಗಿತ್ತು. 1800 ರ ಮದ್ಯದಲ್ಲಿ ಪ್ರಪಂಚದಲ್ಲಿ ದೊಡ್ಡ ಶಕ್ತಿಗಳು ಪರ್ಶಿಯ, ಫ್ರಾನ್ಸ್, ಆಸ್ಟ್ರಿಯ ಹಂಗೇರಿ, ಮತ್ತು ಇಂಗ್ಲೆಂಡ್. ಆ ಸಮಯದಲ್ಲಿ ಅಮೇರಿಕ ತನ್ನ ಬಳಿಯಲ್ಲಿ ಇಪ್ಪತ್ತು ಸಾವಿರ ಸಂಖ್ಯೆಯ ಶಾಂತಿ ಸೈನ್ಯವನ್ನು ಹೊಂದಿತ್ತು. ವಾಟರ್ಲೂ

(1815) ಯುದ್ದದ ಸೈನ್ಯದ ಒಂದನೇಯ ಹತ್ತು ಭಾಗದಷ್ಟು. 1814 ರಲ್ಲಿ ನಲವತ್ತು ವರ್ಷಗಳ ಹಿಂದೆ ಒಂದು ಸೈನ್ಯವು ಅಮೇರಿಕದ ಒಂದು ಸೈನ್ಯವನ್ನು ಸೋಲಿಸಿತ್ತು. ಇದರಿಂದ, ಮುಂದೆ ಒಂದು ದಿನ ಇದು ಮೃಗದ ಗುರುತನ್ನು ಲೋಕದ ಮೇಲೆ ಹೇರುವ ಶಕ್ತಿಯಾಗಿ ಅದು ಉದಯಿಸುತ್ತದೆ. ಆದರೆ ಅಮೇರಿಕ ದೇಶವು ತನ್ನ ಸ್ವಂತ ಜನರ ಜೊತೆಯಲ್ಲಿ ಹೋರಾಟ ಮಾಡುತ್ತಿತ್ತು. ಅದರಲ್ಲಿ ಯಾವಾಗಲೂ ಜಯ ಸಾಧಿಸಲು ಸಾಧ್ಯವಾಗಲಿಲ್ಲ.

ಲೋಕದ ವಿಚಾರಗಳು ಅವು ಯೋಚಿಸುವ ರೀತಿಯಲ್ಲಿ ನಡೆಯುತ್ತಿವೆ. ಆದರೆ ಕೊನೆಯ ಕಾಲವನ್ನು ಸಮೀಪಿಸಲು ಇನ್ನೂ ಕೆಲವು ಘಟನೆಗಳು ನಡೆಯಬೇಕು. ಅದಕ್ಕಾಗಿಯೇ ಉದಾಹರಣೆಗೆ ಮೃಗದ ಗುರುತು ಇನ್ನೂ ಯಾರು ಅದನ್ನು ಹೊಂದಿಲ್ಲ ನಾವು ನಾಲ್ಕನೇಯ ಆಜ್ಞೆಯನ್ನು ಕೈಕೊಂಡು ನಡೆದರೂ ಅಥವಾ ನಡೆಯದೆ ಇದ್ದರೂ ಕೂಡ ಇದು ಮುಖ್ಯವಾದ ವಿಷಯವಾಗಿಲ್ಲ.

ಇದಕ್ಕೆ ಜೊತೆಯಾಗಿ ಇನ್ನೂ ಅನೇಕ ವಿಚಾರಗಳು ನಡೆಯಬೇಕು.

**ಪ್ರಕಟಣೆ 18:1–4ನ್ನು ಓದಿರಿ. ಇಲ್ಲಿ ಏನು ನಡೆಯುತ್ತಿದೆ, ಮತ್ತು ಇದನ್ನು ಜ್ಞಾಪಕಮಾಡಿಕೊಳ್ಳುವುದು ಯಾಕೆ ಮುಖ್ಯವಾಗಿದೆ? ಲೋಕಕ್ಕೆ ಸಾರಬೇಕಾದ ಸುವಾರ್ತೆಯ ವಿಚಾರದಲ್ಲಿ ಈ ವಚನಗಳು ಏನು ಹೇಳುತ್ತವೆ?**

ಈ ವಚನಗಳು ಲೋಕದ ರಾಜಕೀಯ, ನೈತಿಕ, ಮತ್ತು ಆತ್ಮಿಯತೆಯ ಕಪ್ಪು ಬಣ್ಣವನ್ನು ತೋರಿಸುತ್ತವೆ. ಲೋಕದಲ್ಲಿ ಬೋಧಿಸಲಾಗುತ್ತಿರುವ ಸುಳ್ಳು ಧರ್ಮದ ಕೆಟ್ಟ ಪ್ರಭಾವದ ಕುರಿತಾಗಿ ಹೇಳುತ್ತವೆ. ಅದೇ ಸಮಯದಲ್ಲಿ, ಅವು ದೊಡ್ಡ ನಿರೀಕ್ಷೆಯನ್ನು ನೀಡುತ್ತವೆ, ಯಾಕೆಂದರೆ ಮತ್ತೊಬ್ಬ ದೇವದೂತನು

ಪರಲೋಕವನ್ನು ತನ್ನ ಬೆಳಕಿನಿಂದ ಪ್ರಕಾಶಮಾನಗೋಳಿಸುವನು. ಮುಂದೆ, ಯಾರು ದೇವರ ವಾಕ್ಯವನ್ನು ಸರಿಯಾಗಿ ತಿಳಿದುಕೊಂಡಿಲ್ಲ ಅವರನ್ನು ಬಾಬೇಲಿನಿಂದ ಹೊರಗೆ ಕರೆಯಲಾಗುವುದು. ಇದರ ಅರ್ಥವೆಂದರೆ, ಕೊನೆಯ ಕಾಲದ ತನಕ, ಬಾಬೇಲಿನಿಂದ ಹೊರಗೆ ಬಂದಿರುವ ದೇವರ ಜನರು ಇನ್ನೂ ಬಾಬೇಲಿನಲ್ಲಿರುವವರನ್ನು ಹೊರಗೆ ಕರೆಯುವ ದೊಡ್ಡ ಜವಾಬ್ದಾರಿಯನ್ನು ಹೊಂದಿದ್ದಾರೆ.

**ಬಾಬೇಲಿನಲ್ಲಿರುವ ಕೆಲವು ಜನರನ್ನು ದೇವರು ನನ್ನ ಜನರು ಎಂದು ಕರೆಯುವುದರಲ್ಲಿ ಇರುವ ಅರ್ಥವೇನು? ಇತರರ ಜೊತೆಯಲ್ಲಿ ಇರುವ ನಮ್ಮ ಸಂಭಂಧದಲ್ಲಿ ಈ ಅಂಶವು ಎಷ್ಟು ಮುಖ್ಯವಾಗುತ್ತದೆ.?**

**ಶುಕ್ರವಾರ**

**ಮುಂದಿನ ಆಲೋಚನೆ :** ಸೈತಾನನು ದೇವರ ಆಜ್ಞೆಯ ಮೇಲೆ ಮಾಡುವ ದಾಳಿಯು ಆತನ ಮೇಲೆ ಮತ್ತು ಆತನ ರಾಜ್ಯದ ಹಾಗೂ ಅಧಿಕಾರದ ಮೇಲೆ ನೇರವಾಗಿ ಮಾಡುವ ದಾಳಿಯಾಗಿದೆ. ಆದ್ದರಿಂದ ಕೊನೆಯ ದಿನಗಳಲ್ಲಿ, ಕೊನೆಯ ಕಾಲದ ಕೊನೆಯ ಘಟನೆಗಳಲ್ಲಿ, ಸೈತಾನನು ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವವರ ಮೇಲೆ ಯುದ್ದವನ್ನು ಮಾಡುತ್ತಾನೆ (ಪ್ರಕಟಣೆ 12:17, 14:12), ಯಾಕೆಂದರೆ ಅವರು ಮಾತ್ರ ಯಾವುದೇ ರೀತಿಯ ಕಷ್ಟಗಳು ಬಂದರೂ ಕೂಡ ಅವನನ್ನು ಎದುರಿಸಿ ನಿಲ್ಲುತ್ತಾರೆ. ಸೈತಾನನು ಪರಲೋಕದಲ್ಲಿ ಆರಂಭಿಸಿದ ಯುದ್ದವನ್ನು ಭೂಮಿಯ ಮೇಲೆ ಮುಂದುವರೆಸುತ್ತಾನೆ. ಅವನು ಯಾವ ರೀತಿಯಲ್ಲಿ ಪರಲೋಕದಲ್ಲಿ ಸೋತನೋ ಅದೇ ರೀತಿಯಲ್ಲಿ ಭೂಮಿಯ ಮೇಲೂ ಕೂಡ ಸೋಲುತ್ತಾನೆ. ಮಹಾ ಹೋರಾಟ ಆರಂಭದಿಂದಲೂ ಕೂಡ ದೇವರ ಆಜ್ಞೆಯನ್ನು ಒಡೆಯುವುದೇ ಸೈತಾನನ ಮುಖ್ಯವಾದ ಉದ್ದೇಶವಾಗಿದೆ. ಇದನ್ನು ನೆರವೇರಿಸಲು ಅವನು ದೇವರ ವಿರುದ್ದವಾಗಿ ತಿರುಗಿ ಬಿದ್ದನು, ಮತ್ತು ಅವನು ಪರಲೋಕದಿಂದ ದೊಬ್ಬಲ್ಪಟ್ಟರೂ ಕೂಡ ಈ ಭೂಮಿಯ ಮೇಲೆ ತನ್ನ ಯುದ್ದವನ್ನು ಮುಂದುವರೆಸಿದನು. ಮನುಷ್ಯರನ್ನು ಮೋಸಗೊಳಿಸಿ,

ಅವರನ್ನು ದೇವರ ಆಜ್ಞೆಯನ್ನು ಮೀರುವಂತೆ ಮಾಡುವುದು ಅವನ ಪ್ರಮುಖವಾದ ಉದ್ದೇಶವಾಗಿದೆ. ಇದನ್ನು ಸಾಧಿಸಲು ದೇವರ ಆಜ್ಞೆಯನ್ನು ಸಂಪೂರ್ಣವಾಗಿ ತೆಗೆದುಹಾಕುವುದು, ಅಥವಾ ಅದರಲ್ಲಿ ಒಂದು ಭಾಗವನ್ನು ತೆಗೆದುಹಾಕುವುದು, ಇದರ ಪಲಿತಾಂಶವು ಒಂದೇ ಆಗಿರುತ್ತದೆ. ಒಂದರಲ್ಲಿ ತಪ್ಪಿ ಹೋದವನು ಎಲ್ಲಾ ಆಜ್ಞೆಗಳನ್ನು ಮೀರಿದವನಾಗಿದ್ದಾನೆ (ಯಾಕೋಬ 2:10). ಇದರಲ್ಲಿ ಅವನ ಪ್ರಭಾವವು ಬಹಳ ಹೆಚ್ಚಾಗಿರುತ್ತದೆ. **ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 582**.

## ಚರ್ಚಿಸಬೇಕಾದ ಪ್ರಶ್ನೆಗಳು:

1. ನಿಮ್ಮ ತರಗತಿಯಲ್ಲಿ ಕೊನೆಯ ದಿನಗಳಲ್ಲಿ ನಡೆಯುವ ಘಟನೆಗಳ ಕುರಿತಾಗಿ ಅವು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂಬುದರ ಕುರಿತಾಗಿ ಚರ್ಚಿಸಿರಿ?ಸತ್ಯವೇದ ಮತ್ತು ಎಲೆನ್ ಜಿ ವೈಟ್ ಮ್ಮ ನವರ ಬರವಣಿಗೆ ಯಲ್ಲಿ ತಿಳಿಸದೇ ಇರುವ ವಿಷಯಗಳಾದ ದಿನಾಂಕವನ್ನು ನಿರ್ಧರಿಸುವುದು, ಅತಿಯಾದ ಧಾರ್ಮಿಕತೆ ಮತ್ತು ನಡೆಯಲಿರುವ ಘಟನೆಗಳ ಕುರಿತಾಗಿ ಭವಿಷ್ಯ ನುಡಿಯುವುದು ಇಂತಹ ಅತಿರೇಕಗಳನ್ನು ನಾವು ಹೇಗೆ ತಡೆಯಬಹುದು?

2. ಬಾಬೇಲಿನಲ್ಲಿ ದೇವರ ಜನರು ಇನ್ನೂ ಇದ್ದಾರೆ ಎಂಬುದರ ಕುರಿತಾಗಿ ಯೋಚಿಸಿರಿ. ಬಾಬೇಲ್ ಎಂಬುದರ ಅರ್ಥವೇನು (ಅದನ್ನು ನಾವು ಹೋಲಿಕೆಯಾಗಿ ನೋಡಬೇಕೋ ಅಥವಾ ನಿಜವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕೋ)?ಜನರು ಯಾವುದೆ ರಾಜಕೀಯ ಮತ್ತು ಧಾರ್ಮಿಕ ಹಿನ್ನಲೆಯನ್ನು ಹೊಂದಿದ್ದರೂ ಕೂಡ ಅವರಿಗೆ ದೇವರ ಸಂದೇಶವನ್ನು ಸಾರುವುದರ ಕುರಿತಾಗಿ ಇದು ನಮಗೆ ಯಾವ ಜವಬ್ದಾರಿಯನ್ನು ನೀಡುತ್ತದೆ?